# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.44/2016

| | | | |
|---|---|---|---|
| ಚಾಸಾ | **2** | ಪ್ರಾಸಾ | **2** |
| ಹೆಸರು | | ಸುನಂದ | |
| ಗಂಡನ ಹೆಸರು | | ಲೇಟ್ ಪುಟ್ಟರಾಜು | |
| ವಯಸ್ಸು | | **62** ವರ್ಷಗಳು | |
| ಉದ್ಯೋಗ | | ಗೃಹಿಣಿ | |
| ವಿಳಾಸ | | ಬೆಂಗಳೂರು | |

ದಿನಾಂಕ**.16.10.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನನಗೆ ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲ. ಚಾಸಾ**-1, 3** ರಿಂದ **6** ರವರ ಪೈಕಿ ಚಾಸಾ**-1** ಮತ್ತು ಚಾಸಾ**-4** ರವರು ಮಾತ್ರ ನನಗೆ ಗೊತ್ತು.

**2013**ನೇ ಸಾಲಿನಲ್ಲಿ ಬೆಳಿಗ್ಗೆ **7.30**ರ ಸಮಯಕ್ಕೆ ನಾನು ಚಾಸಾ**-1** ರವರೊಂದಿಗೆ ದ್ವಿಚಕ್ರ ವಾಹನದಲ್ಲಿ ಕನಕಪುರದಿಂದ ಬೆಂಗಳೂರಿಗೆ ಹೋಗುತ್ತಿದ್ದಾಗ ಸರ್ಕಾರಿ ಬಸ್ಸು ನಮಗೆ ಹಿಂದಿನಿಂದ ಬಂದು ಡಿಕ್ಕಿ ಪಡಿಸಿತು. ಅದರಿಂದ ನಾನು ಮೂರ್ಚೆ ಹೋದೆ, ನಂತರ

ಏನಾಯಿತು ನನಗೆ ಗೊತ್ತಿಲ್ಲ. ಚಿಕಿತ್ಸೆಗಾಗಿ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಈ ಮೇಲಿನ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರವರು ಅನುಮತಿ ಕೋರಿದ್ದು, ಅನುಮತಿಯನ್ನು ನೀಡಲಾಯಿತು.

ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ದಿನಾಂಕ.**09.12.2013**ರಂದು ನಮಗೆ ಅಪಘಾತ ಆಗಿತ್ತು ಎಂದರೆ ಸರಿ. ಅಪಘಾತ ವು ಕನಕಪುರ-ಬೆಂಗಳೂರು ರಸ್ತೆಯ ಏಡುಮಡು ಗ್ರಾಮದ ಬಳಿ ಆಗಿರುತ್ತದೆ ಎಂದರೆ ಸರಿ. ಆ ದಿನ ನಮ್ಮ ವಾಹನಕ್ಕೆ ಅಪಘಾತ ಪಡಿಸಿದ ಬಸ್ಸಿ ನ ಸಂಖ್ಯೆ ಕೆಎ-**01-**ಎಫ್-**1229** ಎಂದರೆ ನನಗೆ ಗೊತ್ತಿಲ್ಲ. ಅಪಘಾತ ದಿಂದ ನಾನು ಕೆಳಕೆ ಬಿದ್ದಾಗ ನನ್ನ ಎದೆಗೆ, ಬೆನ್ನಿಗೆ, ತಲೆಗೆ, ಕೈಗಳಿಗೆ ಹಾಗೂ ದೇಹದ ಇತರ ಭಾಗಗಳಲ್ಲಿ ಪೆಟ್ಟಾಗಿ ರಕ್ತ ಬರುತ್ತಿತ್ತು ಎಂದರೆ ಸರಿ. ನಂತರ ಕೋನಣಕುಂಟೆಯಲ್ಲಿರುವ ಸಿದ್ದಲಿಂಗಪ್ಪ ಆಸ್ಪತ್ರೆಗೆ ನಮ್ಮನ್ನು ಚಿಕಿತ್ಸೆಗಾಗಿ ದಾಖಲಿಸಿದ್ದರು ಎಂದರೆ ಸರಿ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ-

ಆ ದಿನ ಚಾಸಾ-**1** ರವರೆ ನಮ್ಮ ವಾಹನವನ್ನು ಚಾಲನೆ ಮಾಡುತ್ತಿದ್ದರು ಎಂದರೆ ಸರಿ. ವಾಹನ ಚಾಲನೆ ಮಾಡುವ ಸಮಯದಲ್ಲಿ ರಸ್ತೆಯಲ್ಲಿರುವ ಹಂಮ್ಸ್ ಬಂದು ಅದನ್ನು

ಎಗರಿಸಿ ಚಾಸಾ-1 ರವರೆ ಬಿದ್ದಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿಯ ತಪ್ಪಿ ನಿಂದ ಆ ದಿನ ಸದರಿ ಅಪಘಾತವು ಸಂಭವಿಸಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ದ್ವಿಚಕ್ರ ವಾಹನದಿಂದ ಸ್ಕಿಡ್ ಆಗಿ ನಾವೇ ಬಿದ್ದು ಗಾಯ ಮಾಡಿಕೊಂಡಿದ್ದು, ಪಕ್ಕದಿಂದ ಹೋದಂತಹ ಬಿಎಂಟಿಸಿ ಬಸ್ಸಿ ನ ವಿರುದ್ದ ಕೇವಲ ಪರಿಹಾರ ಪಡೆದುಕೊಳ್ಳುವುದಕೋಸ್ಕರವೇ ಸುಳ್ಳು ಕೇಸನ್ನು ಆರೋಪಿಯ ವಿರುದ್ದ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಕೇವಲ ಪರಿಹಾರ ಪಡೆದುಕೊಳ್ಳುವುದಕೋಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಮಗೆ ಅಪಘಾತ ಪಡಿಸಿದ ವಾಹನವು ಸರ್ಕಾರಿ ಕೆಂಪು ಬಸ್ಸು ಆಗಿರುತ್ತದೆ. ಆರೋಪಿಯ ತಪ್ಪಿ ನಿಂದ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

ಓ ಹೇ ಕೇ ಸರಿ ಇದೆ,

(ರಾಧ.ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಕನಕಪುರ.